ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ ಪ್ರೌಮುಶಿ ವರ್ಗಾವಣೆ 01/2018-19 ದಿನಾಂಕ: 06.07.2018

**ಅತಿಜರೂರು**

ಸುತ್ತೋಲೆ

ವಿಷಯ: 2017-18 ನೇ ಸಾಲಿನ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ - ಬಿ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಹಿರಿಯ ಸಹಾಯಕ ನಿರ್ದೇಶಕರು ಸಿಬ್ಬಂದಿ ಶಾಖೆ ಇವರ ಟಿಪ್ಪಣಿ ದಿನಾಂಕ: 06.07.2018

ಉಲ್ಲೇಖಿತ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿದಂತೆ, 2017-18 ನೇ ಸಾಲಿನ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ - ಬಿ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯನ್ನು ನಡೆಸಲು ದಿನಾಂಕ: 05.07.2018 ರಂದು ವರ್ಗಾವಣಾ ವೇಳಾಪಟ್ಟಿಯನ್ನು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಶಿಕ್ಷಕರ ಮಾಹಿತಿ ತಂತ್ರಾಂಶ (ಟಿ.ಡಿ.ಎಸ್.) ನಲ್ಲಿ ಎ ವಲಯದಲ್ಲಿ ಸತತವಾಗಿ 10 ವರ್ಷಗಳಿಗೂ ಹೆಚ್ಚು ಸೇವೆಯನ್ನು ಸಲ್ಲಿಸಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ ಬಿ ವೃಂದದ ಅಧಿಕಾರಿಗಳ ಪಟ್ಟಿಯನ್ನು ದಿನಾಂಕ: 09.07.2018 ರಂದು ಪ್ರಕಟಿಸಬೇಕಾಗಿದೆ.

ಅದರಂತೆ ಈವರೆವಿಗೂ ಮಾಹಿತಿಯನ್ನು ಅಳವಡಿಸದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ - ಬಿ ವೃಂದದ ಅಧಿಕಾರಿಗಳು ದಿನಾಂಕ: 07.07.2018 ಮದ್ಯಾಹ್ನ 2.00 ಗಂಟೆಯೊಳಗೆ ತಪ್ಪದೇ ಅಳವಡಿಸಲು ಈ ಮೂಲಕ ಸೂಚಿಸಿದೆ.

ತಪ್ಪಿದ್ದಲ್ಲಿ ಸಂಬಂದಪಟ್ಟ ಅಧಿಕಾರಿಯು ನೇರವಾಗಿ ಜವಾಬ್ದಾರಾಗಿರುತ್ತಾರೆಂದು ಈ ಮೂಲಕ ತಿಳಿಸಿದೆ.

ಅಪರ ನಿರ್ದೇಶಕರು(ಆಡಳಿತ)

ಪ್ರತಿಯನ್ನು

1. ಅಪರ ಆಯುಕ್ತರು ಗುಲ್ಬರ್ಗಾ ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ
2. ಅಪರ ಆಯುಕ್ತರು ದಾರವಾಡ ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಉಪನಿರ್ದೇಶಕರು (ಡಯಟ್) ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ